**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 78/2019**

ಪ್ರಾ.ಸಾ. 8

ಚಾ.ಸಾ. 13

**ಪ್ರಮಾಣವಚನ ಬೋಧಿಸಿದ ದಿನಾಂಕ 05.08.2024**

ಸಾಕ್ಷಿದಾರರ ಹೆಸರು ಮರಿಸ್ವಾಮಿ

ತಂದೆಯ ಹೆಸರು ಓಗೀಗೌಡ

ವಯಸ್ಸು 61 ವರ್ಷ

ಉದ್ಯೋಗ ವ್ಯವಸಾಯ

ವಾಸ ನೆಲಮಾಕನಹಳ್ಳಿ ಗ್ರಾಮ, ಮಳವಳ್ಳಿ ತಾಲ್ಲೂಕು

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ರಿಂದ 7, 9 ರಿಂದ 12 ಗೊತ್ತು. ಚಾಸಾ.14 ರಿಂದ 21 ಗೊತ್ತು. ಚಾಸಾ.1 ರವರ ತಾಯಿಯ ಮನೆ ಕೆಂಚನದೊಡ್ಡಿ ಗ್ರಾಮ. ಚಾಸಾ.1 ರವರ ಮದುವೆ 1 ನೇ ಆರೋಪಿಯೊಂದಿಗೆ ನಡೆದಿತ್ತು, ಈ ಸಂಬಂಧ ಮದುವೆ ಮಾತುಕತೆ ಮಣಿಗೆರೆ ಗ್ರಾಮದ ಚಾಸಾ.11 ಹಾಗೂ 12 ಇವರ ಮನೆಯಲ್ಲಿ ನಡೆದಿತ್ತು.
ಚಾಸಾ.20 ರವರು 1 ನೇ ಆರೋಪಿಯ ಅಕ್ಕನ ಗಂಡ. ಚಾಸಾ.21 ರವರು 1 ನೇ ಆರೋಪಿಯ ಅಕ್ಕ. ಚಾಸಾ.1 ರವರು ಚಾಸಾ.2 ರವರ ಮೂರನೇ ಮಗಳು.

2. ನಾನು, ಚಾಸಾ.1 ರವರ ತಂದೆ ತಾಯಿ, ಚಾಸಾ.13 ಹಾಗೂ 14, ಸಿದ್ದೇಗೌಡ, 1 ನೇ ಆರೋಪಿ ಕಡೆಯಿಂದ ಆತನ ತಂದೆ ತಾಯಿ, ಮೊಗಣ್ಣ ಬಂದಿದ್ದರು, ಹುಡುಗನಿಗೆ

ವರದಕ್ಷಿಣೆಯಾಗಿ ಬೈಕಿಗಾಗಿ ರೂ.50,000/-, ಕತ್ತಿಗೆ 25 ಗ್ರಾಂ ಚೈನು, 10 ಗ್ರಾಂ ಉಂಗುರ ಕೇಳಿದ್ದರು, ಹುಡುಗಿಗೆ ಮಾಂಗಲ್ಯ ಸರ, ಓಲೆ, ಜುಮುಕಿ, ನಕ್ಲೇಸ್ ಆಗಬೇಕು ಎಂದು ಹೇಳಿದ್ದರು, ಮದುವೆಯನ್ನು ಬಾಲಾಜಿ ಸಮುದಾಯ ಭವನದಲ್ಲಿ ಮಾಡಬೇಕು ಕೇಳಿದ್ದರು ಅದಕ್ಕೆ ಚಾಸಾ.2 ಹಾಗೂ 3 ರವರು ಒಪ್ಪಿಕೊಂಡಿದ್ದರು.

3. ಮದುವೆಯಾದ ಮೇಲೆ ಗಂಡ ಹೆಂಡತಿ ಇಬ್ಬರು ನೆಲಮಾಕನಹಳ್ಳಿ ಗ್ರಾಮದ ಆರೋಪಿತರ ಮನೆಯಲ್ಲಿ ವಾಸ ಇದ್ದರು. ಎರಡು-ಮೂರು ವರ್ಷಗಳು ಚೆನ್ನಾಗಿದ್ದರು. ಅವರಿಗೆ ಒಂದು ಗಂಡು ಮಗು ಇತ್ತು. 1 ನೇ ಆರೋಪಿ ತಂದೆ ಆ ಸಮಯದಲ್ಲಿ ಊರಿನಲ್ಲಿ ದಿನಸಿ ಅಂಗಡಿ ಇಟ್ಟುಕೊಂಡಿದ್ದರು, ಅದನ್ನು 1 ನೇ ಆರೋಪಿ ನೋಡಿಕೊಳ್ಳುತ್ತಿದ್ದರು.

4. ನಂತರ ದಿನಗಳಲ್ಲಿ ಅಂಗಡಿ ಸರಿಯಾಗಿ ವ್ಯಾಪಾರ ನಡೆಯದೇ ನಷ್ಟ ಉಂಟು ಆಯಿತು, ಹೀಗಾಗಿ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಚಾಸಾ.1 ರವರನ್ನು ಪೀಡಿಸಲು ಪ್ರಾರಂಭಿಸಿದರು. ಹೀಗಾಗಿ ಆಕೆಗೆ ಹಿಂಸೆ ಕೊಡುತ್ತಿದ್ದ ವಿಷಯವನ್ನು ತಂದೆ ತಾಯಿ ಬಳಿ ಹೇಳಿಕೊಳ್ಳುತ್ತಿದ್ದಳು. ಚಾಸಾ.2 ಈ ವಿಷಯ ನನಗೆ ಹೇಳಿದ್ದರು. ಆರೋಪಿತರ ಹಿಂಸೆ ತಡೆಯಲಾರದೆ ಚಾಸಾ.1 ರವರು ತಾಯಿ ಮನೆಗೆ ಬಂದಳು. ಆಗ ಎರಡು ವರ್ಷ ಕಳೆದ ಮೇಲೆ 1 ನೇ ಆರೋಪಿ ಚಾಸಾ.1 ರವರ ತಾಯಿ ಮನೆಗೆ ಬಂದು ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ನನ್ನೊಂದಿಗೆ ಕಳುಹಿಸಿಕೊಡಿ ಎಂದು ಕೇಳಿಕೊಂಡನು. ಆಗ ಚಾಸಾ.2 ಹಾಗೂ 3 ರವರು ನಾವೇ ಆಕೆಯನ್ನು ಕರೆದುಕೊಂಡು ಬರುತ್ತೇವೆ ನೀವು ಹೋಗಿ ಎಂದು ಹೇಳಿ ಮರುದಿವಸ ಚಾಸಾ.1 ರವರನ್ನು ಕರೆದುಕೊಂಡು ಆಕೆಯ ಗಂಡನ ಮನೆಗೆ ಮದ್ಯಾಹ್ನ 12.30 ಗಂಟೆ ಸಮಯಕ್ಕೆ ಹೋದಾಗ ಇಬ್ಬರು ಆರೋಪಿತರು ವರದಕ್ಷಿಣೆ ಹಣವನ್ನು ತರದೇ ಮನೆಗೆ ಏಕೆ ಬಂದೆ ಎಂದು ಜಗಳ ತೆಗೆದು, ಗಲಾಟೆ ಮಾಡಿದರು, ಚಾಸಾ.1 ರವರಿಗೆ ಆರೋಪಿತರಿಗೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಲು ಪ್ರಯತ್ನಿಸಿದರು, ಆಗ ಅಕ್ಕ ಪಕ್ಕದವರು ಬಂದು ಗಲಾಟೆ ಬಿಡಿಸಿದರು. ಚಾಸಾ.1 ರವರಿಗೆ ಒಂದು ವಾರದವರೆಗೂ ಊಟ ತಿಂಡಿ ಕೊಡದೇ ಮನೆಯಿಂದ ಹೊರ ಹಾಕಿದ್ದರು ಆಗ ತಂದೆ ತಾಯಿ ಬಂದು ಚಾಸಾ.1 ರವರನ್ನು ವಾಪಸ್ ಮನೆಗೆ ಕರೆದುಕೊಂಡು ಹೋದರು ಎಂಬ ವಿಷಯ ನನಗೆ ತಿಳಿಯಿತು. ಈ ಬಗ್ಗೆ ಚಾಸಾ.1 ರವರು ದೂರು ಕೊಟ್ಟ ವಿಷಯ ತಿಳಿಯಿತು. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಗಲಾಟೆ ಮಾಡಿದಂತಹ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯಾಗಿದ್ದು, 2 ನೇ ಆರೋಪಿ ಗೈರು ಹಾಜರಾಗಿದ್ದು ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಚಾಸಾ.3 ಮೂಲತಃ ನನ್ನ ಊರಿನವರು, ಸದರಿಯವರ ನನ್ನ ಸಂಬಂಧಿಕರು ಅಲ್ಲ. ನನ್ನ ಮನೆಯಿಂದ ಅವರ ಮನೆಗೆ ಸುಮಾರು ಒಂದು ಫರ್ಲಾಂಗ್ ದೂರ ಆಗಬಹುದು. ನನ್ನ ಸಮಕ್ಷಮ ಹಣ ಕೊಡುವುದು ತೆಗೆದುಕೊಳ್ಳುವುದು ಆಗಿರಲಿಲ್ಲ. ಮದುವೆಗೆ ನಾನು ಹೋಗಿದ್ದೆ. ಆಗ ಚಾಸಾ.2 ಹಾಗೂ 3 ರವರು ನನ್ನ ಸಮಕ್ಷಮ ಒಡವೆಗಳನ್ನು ಕೊಟ್ಟಿರಲಿಲ್ಲ. ಸನಂತರ 1 ನೇ ಆರೋಪಿ ಬೈಕು ತೆಗೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ.1 ರವರು ಅವರಿಗೆ ಆರೋಪಿತರು ಕಿರುಕುಳ ಕೊಡುತ್ತಿದ್ದ ಬಗ್ಗೆ ಖುದ್ದಾಗಿ ನನ್ನ ಬಳಿ ಬಂದು ಹೇಳಿರಲಿಲ್ಲ. ದಿನಾಂಕ 18.11.2016 ರಂದು ನಾನು ಆರೋಪಿತರ ಮನೆಗೆ ಹೋಗಿರಲಿಲ್ಲ. ಊರಿನಲ್ಲಿ ಆರೋಪಿತರ ಮನೆತನ ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸರಿ.

4. ಆರೋಪಿತರ ವಿರುದ್ಧ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದ ಬಗ್ಗೆ ಚಾಸಾ.2 ಹಾಗೂ 3 ರವರು ಹಾಗೂ ಚಾಸಾ.1 ಕೇಸು ಹಾಕಿದ್ದ ವಿಷಯ ಹಾಗೂ ವಿಚ್ಛೇದನಾ ಹಾಗೂ ಜೀವನಾಂಶ ಕೇಸು ಹಾಕಿರುವ ವಿಷಯ ನನಗೆ ಗೊತ್ತಿಲ್ಲ.

5. ಮಣಿಗೆರೆ ಗ್ರಾಮದಲ್ಲಿ ಮದುವೆ ಮಾತುಕತೆ ನಡೆದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ ಆರೋಪಿತರು ಯಾವುದೇ ವರದಕ್ಷಿಣೆ ಹಣ, ಒಡವೆಗಳನ್ನು ಕೇಳಿರಲಿಲ್ಲ ಎಂದರೆ ಸರಿಯಲ್ಲ. ಆರ್ಥಿಕವಾಗಿ ಆರೋಪಿತರು ಚೆನ್ನಾಗಿದ್ದರಿಂದ ಮದುವೆ ಚೌಲ್ಟ್ರಿ ಅವರ ಮನೆಗೆ ಹತ್ತಿರವಿದ್ದರಿಂದ ಅವರೇ ಹಣ ಹಾಕಿ ಮದುವೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

8. ಚಾಸಾ.1 ರವರಿಗೆ ಮಗುವಾದ ಮೇಲೆ ಮಳವಳ್ಳಿ ಸಿಟಿಯಲ್ಲಿ ಮನೆ ಮಾಡಿ ವಿದ್ಯಾಭಾಸ ಕೊಡಿಸುವಂತೆ ಮನೆಯಲ್ಲಿ ಗಲಾಟೆ ಮಾಡಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿಯ ತಂದೆಗೆ ಪಾರ್ಶ್ವ ವಾಯು ಆಗಿದೆ ಹೀಗಾಗಿ ಇನ್ನೊಂದು ಮನೆ ಮಾಡಲು ಆಗುವುದಿಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ತಂದೆ ತಾಯಿ ಖಾಯಿಲೆ ಇರುವುದರಿಂದ ಅವರನ್ನು ನೋಡಿಕೊಳ್ಳಬೇಕಾಗುತ್ತದೆ ಎಂಬ ಕಾರಣದಿಂದ ಆಕೆ ಮನೆ ಬಿಟ್ಟು ಆಚೆ ಬಂದಿದ್ದು ಆರೋಪಿತರು ಯಾವುದೇ ವರದಕ್ಷಿಣೆ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಚಾಸಾ.1 ರವರು ಹಾಕಿರುವ ಕೇಸಿಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ.2 ಹಾಗೂ 3 ರವರು ಗಂಡನ ಮನೆಗೆ ಹೋದಾಗ ಆರೋಪಿತರು ಸೀಮೆಎಣ್ಣೆ ಹಾಕಿ ಸುಡುವ ಪ್ರಯತ್ನ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವರು ಯಾವತ್ತೂ ನೆಲಮಾಕನಹಳ್ಳಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಿಜಾಂಶ ಗೊತ್ತಿದ್ದರೂ ಕೂಡ ಚಾಸಾ.1 ರಿಂದ 3 ರವರು ನನ್ನ ಊರಿನವರು ಆದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.